## 2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಕ್ಕೋಡಿ

**ಸಿ.ಸಿ.ನಂ. 1884/2018**

ರಾಜ್ಯದ ಪರವಾಗಿ, ಪಿ.ಎಸ್.ಐ., ........ಪಿರ್ಯಾದಿ
ಅಂಕಲಿ ಪೋಲಿಸ್ ಠಾಣೆ

**ವಿರುದ್ಧ**

ಸುಮಯ್ಯಾ ಅಲಾಫ ಸನದಿ
ಮತ್ತು ಇತರರು ........ಆರೋಪಿತರು

**ದೋಷಾರೋಪಣೆ**

ನಾನು ಶ್ರೀ ನಾಗೇಶ ಪಾಟೀಲ ಬಿ.ಕಾಂ.,ಎಲ್.ಎಲ್.ಬಿ. 2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಿಕ್ಕೋಡಿ, ನಿಮ್ಮನ್ನು ಅಂದರೆ,

1) ಸುಮಯ್ಯಾ ಅಲಾಫ್ ಸನದಿ,
ವಯಸ್ಸುಃ 25 ವರ್ಷ,

2) ಅಲಾಫ ಅಪ್ಪಾ ಸನದಿ,
ವಯಸ್ಸುಃ 28 ವರ್ಷ,

3) ಶ್ರೀಮತಿ ಬೇಬಿಜಾನ ಅಪ್ಪಾ ಸನದಿ,
ವಯಸ್ಸುಃ 54 ವರ್ಷ,

ಎಲ್ಲರೂ ಸಾಃ ಹೊಸಯಡೂರ, ತಾಃ ಚಿಕ್ಕೋಡಿ.

ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆ.

ದಿನಾಂಕಃ 06-07-2018 ರಂದು ಮಧ್ಯಾಹ್ನ 12-00 ಗಂಟೆಗೆ ಚಿಕ್ಕೋಡಿ ಪೋಲಿಸ ಠಾಣಾ ವ್ಯಾಪ್ತಿಯ ಹೊಸಯಡೂರ ಗ್ರಾಮದಲ್ಲಿ 1 ನೇ ಆರೋಪಿತನು ಪಿರ್ಯಾದಿಯವರ ಮನೆಯ ಮುಂದೆ ಕಸ ಕಡ್ಡಿ ಹೊಲಸು ಚೆಲ್ಲಿದ್ದಾಗ, ಪಿರ್ಯಾದಿಯ ಇಲ್ಲಿ ಯಾಕೆ ಹೊಲಸು

ಮಾಡುತ್ತೀರಿ ಅಂತಾ ಕೇಳಿದಾಗ, ಉಳಿದ ಆರೋಪಿತರೆಲ್ಲರೂ ಕೂಡಿಕೊಂಡು ಬಂದು ಪಿರ್ಯಾದಿ/ಚಾಸಾ-1 ಶ್ರೀಮತಿ ಹೀನಾ ಫಿರೋಜ ಮತ್ತೆಭಾಯಿ ರವರ ಜೊತೆ ತಂಟೆ ತೆಗೆದು, ಪಿರ್ಯಾದಿಗೆ ಕೈಯಿಂದ ಹೊಡೆದು ಗಾಯಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

2. 2 ನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 3 ನೇ ಆರೋಪಿತರಾದ ನೀವು ಪಿರ್ಯಾದಿ/ಚಾಸಾ-1 ಶ್ರೀಮತಿ ಹೀನಾ ಫಿರೋಜ ಮತ್ತೆಭಾಯಿ ರವರಿಗೆ ಗಟ್ಟಿಯಾಗಿ ಹಿಡಿದು ಅಕ್ರಮ ತಡೆಯೊಡ್ಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

3. 3 ನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿಯಾದ ನೀವು ಪಿರ್ಯಾದಿ/ಚಾಸಾ-1 ಶ್ರೀಮತಿ ಹೀನಾ ಫಿರೋಜ ಮತ್ತೆಭಾಯಿ ರವರ ಮಾನಭಂಗ ಮಾಡುವ ಉದ್ದೇಶದಿಂದ ಅವಳ ಕೈ ಹಿಡಿದು ಜಗ್ಗಾಡಿ, ಚಿವರಿ ಗಾಯಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 354 ಸಹಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

4. 4 ನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಪಿರ್ಯಾದಿ/ಚಾಸಾ-1 ಶ್ರೀಮತಿ ಹೀನಾ ಫಿರೋಜ ಮತ್ತೆಭಾಯಿ

ರವರ ಶಾಂತಿ ಭಂಗಗೊಳಿಸಿ ಅವಮಾನ ಮಾಡುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

5. 5 ನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಪಿರ್ಯಾದಿ/ಚಾಸಾ-1 ಶ್ರೀಮತಿ ಹೀನಾ ಫಿರೋಜ ಮತ್ತೆಭಾಯಿ ರವರಿಗೆ ಎಚ್ಚರಿಕೆ ನೀಡುವ ಉದ್ದೇಶದಿಂದ ಜೀವದ ಧಮಕಿ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮತ್ತು ನೀವು ಈ ಮೇಲ್ಕಂಡ ದೋಷಾರೋಪಣೆಯ ಬಗ್ಗೆ ವಿಚಾರಣೆಗೆ ಒಳಪಡಲಿದ್ದೀರಿ ಎಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ಕನ್ನಡದಲ್ಲಿ ಓದಿ, ಹೇಳಿ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡು ಸರಿಯಾಗಿದೆ ಎಂದು ದೃಢೀಕರಿಸಿದೆ)
ದಿನಾಂಕಃ

(signature) 23/7

**(ನಾಗೇಶ ಪಾಟೀಲ)**
2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚಿಕ್ಕೋಡಿ.